


ಪುಟ್ಟಣ್ಣ ಕಣಗಾಲ್



ಎನ್. ಲಕ್ಷ್ಮೀನಾರಾಯಣ್

# ಸಿನಿಮಾ ಭಾಷೆ - ಮಣ್ಣಿನ ಭಾಷೆ

> ‘ಕುರುಕ್ಷೇತ್ರ’ ಅಥವಾ ‘ಕ್ರಾಂತಿವೀರ ಸಂಗೊಳ್ಳಿರಾಯಣ್ಣ’ ರೀತಿಯ ಚಿತ್ರಗಳನ್ನು ನೋಡುವುದಕ್ಕೆ ಆತಂಕವಾಗುತ್ತದೆ. ಸಂಗೊಳ್ಳಿರಾಯಣ್ಣ ಚಿತ್ರವನ್ನು ಹದಿನೈದು ಇಪ್ಪತ್ತು ವರ್ಷಗಳ ನಂತರ ನೋಡುವ ಮಗುವೊಂದು, ಸಿನಿಮಾದಲ್ಲಿರುವಂತೆಯೇ ರಾಯಣ್ಣ ಇದ್ದ ಎಂದುಕೊಂಡರೆ ಏನು ಮಾಡುವುದು? ವ್ಯಾಪಾರಿ ಅಂಶಗಳನ್ನು ಅಳವಡಿಸಿಕೊಳ್ಳುವುದು ತಪ್ಪಲ್ಲ, ಆದರೆ, ಇತಿಹಾಸ-ಕಲೆಗೆ ಸಿನಿಮಾಗಳು ಅಪಚಾರ ಮಾಡಬಾರದು.
>
> -ಪಿ. ಶೇಷಾದ್ರಿ

ಕನ್ನಡ ಸಿನಿಮಾಗಳ ಬಗ್ಗೆ ಭಾವುಕವಾಗಿ ಮಾತನಾಡುವ ಅನೇಕರು, ಉತ್ತಮಿಕೆಗೆ ಉದಾಹರಣೆ ನೀಡುವ ಸಿನಿಮಾಗಳಲ್ಲಿನ ತಾಂತ್ರಿಕ ಪ್ರಭಾವಳಿಯ ಬಗ್ಗೆ ಮಾತನಾಡುತ್ತಾರೆ. ಹೀಗೆ ಮಾತನಾಡುವವರು ತನಗೆ ದೊರೆತ ತಾಂತ್ರಿಕ ಸವಲತ್ತುಗಳ ಮೂಲಕ ನಿರ್ದೇಶಕ ಏನನ್ನು ಹೇಳುತ್ತಿದ್ದಾನೆ, ಏನನ್ನು ಮಾತನಾಡುತ್ತಿದ್ದಾನೆ ಎನ್ನುವುದರ ಹುಡುಕಾಟವನ್ನೇ ಮರೆಯುತ್ತಾರೆ. ಛಾಯಾಗ್ರಹಣ ಚೆನ್ನಾಗಿದೆ, ಸಂಗೀತ ಚೆನ್ನಾಗಿದೆ ಎಂದು ಬಿಡಿಬಿಡಿಯಾಗಿ ಚರ್ಚಿಸುವವರು – ಅವುಗಳೆಲ್ಲ ಸೇರಿ ರೂಪುಗೊಂಡಿರುವ ‘ಸಿನಿಮಾ ಭಾಷೆಯ’ ಸ್ವರೂಪ ಯಾವ ಬಗೆಯದ್ದು ಎನ್ನುವುದನ್ನು ವಿಶ್ಲೇಷಿಸುವುದಿಲ್ಲ.

ಹೊಸ ತಲೆಮಾರಿನ ಬಹುತೇಕ ನಿರ್ದೇಶಕರ ಚಿತ್ರಗಳ ಸಮಸ್ಯೆ, ಅವುಗಳಿಗೊಂದು ಗಟ್ಟಿಮುಟ್ಟಾದ ಭಾಷಿಕ–ಪ್ರಾದೇಶಿಕ ಚೌಕಟ್ಟು ಇಲ್ಲದಿರುವುದು. ಪುಟ್ಟಣ್ಣ ಕಣಗಾಲ್, ಎನ್. ಲಕ್ಷ್ಮೀನಾರಾಯಣ್ ಅಥವಾ ಗಿರೀಶ ಕಾಸರವಳ್ಳಿಯವರ ಸಿನಿಮಾಗಳಲ್ಲಿ ಕಾಣಿಸುವ ‘ಕನ್ನಡತನ’ ಇವತ್ತಿನ ಚಿತ್ರಗಳಲ್ಲಿ ಹುಡುಕಿದರೂ ಕಾಣಸಿಗದು. ಜಯತೀರ್ಥ, ಸತ್ಯಪ್ರಕಾಶ್‌ರಂಥ ಬೆರಳೆಣಿಕೆ ನಿರ್ದೇಶಕರ ಚಿತ್ರಗಳಲ್ಲಷ್ಟೇ ಭಾಷಿಕ ಹಾಗೂ ಪ್ರಾದೇಶಿಕ ಆವರಣದ ಪರಿಣಾಮಕಾರಿ ಬಳಕೆಯನ್ನು ಕಾಣಬಹುದು.

ಸಿನಿಮಾಕ್ಕೆ ಕಲೆ ಮತ್ತು ಉದ್ಯಮ ಎರಡರ ಸ್ವರೂಪವಿದ್ದರೂ ನಮ್ಮ ಚಿತ್ರೋದ್ಯಮದ ಬಹುತೇಕರ ಪಾಲಿಗಿದು ಕೇವಲ ವ್ಯಾಪಾರದ ಸರಕು. ಸಾಹಿತ್ಯವೋ ಸಂಗೀತವೋ ಸಂಸ್ಕೃತಿಯ ಸ್ವರೂಪ ಪಡೆದುಕೊಂಡಿರುವಂತೆ ಸಿನಿಮಾದ ಸಾಧ್ಯತೆಗಳು ಅರಳಿಯೇ ಇಲ್ಲ. ‘ಪ್ರೇಕ್ಷಕ ಮನರಂಜನೆಯ ರೂಪದಲ್ಲಿ ಚಿತ್ರವನ್ನು ನೋಡುತ್ತಿದ್ದರೆ, ಚಿತ್ರರಂಗ ಉದ್ಯಮದ ರೂಪದಲ್ಲಿ ಸಿನಿಮಾವನ್ನು ನೋಡುತ್ತಿದೆ. ವ್ಯಾಪಾರ ಕೂಡ ಕಲೆಯ ಭಾಗವಾಗಬೇಕು. ಸಿನಿಮಾ ಎನ್ನುವುದು ಕಲೆಯಾಗಿ, ಜೀವನದರ್ಶನವಾಗಿ ಪರಿಣಮಿಸಬೇಕು. ಇದು ಬಂಗಾಳಿ, ಮರಾಠಿ, ಮಲೆಯಾಳಂ ಸಿನಿಮಾಗಳಲ್ಲಿ ಸಾಧ್ಯವಾಗಿದೆ’ ಎನ್ನುವ ಕಾಸರವಳ್ಳಿಯವರ ಸಿನಿಮಾದರ್ಶನ ಈ ಹೊತ್ತಿನ ಕನ್ನಡ ಸಿನಿಮಾದ ಎಲ್ಲ ನಿರ್ಮಾತೃಗಳ ಸೂತ್ರವಾಗಬೇಕಿದೆ.

ಒಳ್ಳೆಯ ಸಿನಿಮಾಗಳ ಬಗ್ಗೆ ಮಾತನಾಡುವ ಬಹುತೇಕ ನಿರ್ದೇಶಕರು ‘ವಿಶ್ವ ಸಿನಿಮಾ’ದ ಬಗ್ಗೆ ಮಾತನಾಡುತ್ತಾರೆ. ‘ತಮ್ಮ ಸಿನಿಮಾ ಯಾವ ಭಾಷೆಯ ಚಿತ್ರಕ್ಕೂ ಕಡಿಮೆಯಿಲ್ಲ’ ಎಂದು ಆತ್ಮವಿಶ್ವಾಸ ವ್ಯಕ್ತಪಡಿಸುತ್ತಾರೆ. ಆದರೆ, ತಾವು ನಿರ್ಮಿಸಬೇಕಾದುದು ‘ಕನ್ನಡ ಸಿನಿಮಾ’ವನ್ನು ಎನ್ನುವ ಪ್ರಾಥಮಿಕ ಅಂಶವನ್ನೇ ಅವರು ಮರೆತಂತೆ ಕಾಣಿಸುತ್ತದೆ. ಪ್ರಾದೇಶಿಕವಾಗಿದ್ದೂ ವಿಶ್ವದ ಗಮನಸೆಳೆಯುವುದು ಒಂದು ಅತ್ಯುತ್ತಮ ಸಿನಿಮಾದ ಲಕ್ಷಣ.



ಗಿರೀಶ ಕಾಸರವಳ್ಳಿ



ಡಿ.ಸತ್ಯಪ್ರಕಾಶ್



ಜಯತೀರ್ಥ

ಸ್ವರ್ಣಕಮಲ ಸಂದಿರುವುದೂ ಇದೆ. ‘ಬಾಹುಬಲಿ – ದಿ ಬಿಗಿನಿಂಗ್’ ಸಿನಿಮಾ ಅತ್ಯುತ್ತಮ ಚಿತ್ರವಾಗಿ ಆಯ್ಕೆಯಾಗುವುದನ್ನು ಹೇಗೆಂದು ಅರ್ಥೈಸುವುದು?

‘The Quality of the awards is decides the Quality of the Juries’ ಎನ್ನುವ ಅಡೂರು ಗೋಪಾಲಕೃಷ್ಣನ್ ಅವರ ಮಾತನ್ನು ರಾಷ್ಟ್ರಪ್ರಶಸ್ತಿಗಳ ಆಯ್ಕೆಯ ಹಿನ್ನೆಲೆಯಲ್ಲಿ ಪಿ. ಶೇಷಾದ್ರಿ ಉಲ್ಲೇಖಿಸುತ್ತಾರೆ. ತಮ್ಮ ಹಲವು ಚಿತ್ರಗಳಿಗೆ ರಾಷ್ಟ್ರಪ್ರಶಸ್ತಿ ಪಡೆದಿರುವ ಹಾಗೂ ಮೂರು ಬಾರಿ ಜ್ಯೂರಿಯಾಗಿ ರಾಷ್ಟ್ರಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಕೆಲಸ ಮಾಡಿರುವ ಅವರು, ಇತ್ತೀಚಿನ ವರ್ಷಗಳಲ್ಲಿ ಪ್ರಶಸ್ತಿ ಆಯ್ಕೆಯಲ್ಲಿ ಏರುಪೇರು ಉಂಟಾಗಿರುವುದನ್ನು ಒಪ್ಪಿಕೊಳ್ಳುತ್ತಾರೆ. ‘ಕಳೆದ ಒಂದೆರಡು ದಶಕಗಳಿಂದ ಪ್ರಶಸ್ತಿ ಆಯ್ಕೆ ಪ್ರಕ್ರಿಯೆಯಲ್ಲಿ ರಾಜಕಾರಣದ ಸಹಾನುಭೂತಿಯುಳ್ಳ ಜ್ಯೂರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡುತ್ತಿರುವಂತಿದೆ. ಸಿನಿಮಾ ಜ್ಞಾನ ಇಲ್ಲದವರು ಜ್ಯೂರಿಗಳಾದರೆ ಅವರು ಆಯ್ಕೆ ಮಾಡುವ ಸಿನಿಮಾಗಳಲ್ಲಿ ಗುಣಮಟ್ಟ ಕಾಣುವುದು ಹೇಗೆ?’ ಎನ್ನುವುದು ಅವರ ಪ್ರಶ್ನೆ.

ಸಾಮಾನ್ಯವಾಗಿ ಮಲಯಾಳಂ, ಮರಾಠಿ ಹಾಗೂ ಬೆಂಗಾಲಿ ಚಿತ್ರಗಳು ರಾಷ್ಟ್ರಪ್ರಶಸ್ತಿ ಕಣದಲ್ಲಿ ಮುಂಚೂಣಿಯಲ್ಲಿರುತ್ತವೆ. ಆದರೆ, ಈ ಬಾರಿ ಅವುಗಳದು ತೀರಾ ಕನಿಷ್ಠ ಸಾಧನೆ. ಯಾಕೆ ಹೀಗಾಯಿತು? ಬಹುಶಃ, ಈ ಭಾಷೆಗಳಿಂದ ಹೊರತಾದ ಜ್ಯೂರಿಗಳೆಲ್ಲ ಒಟ್ಟಾಗಿ ‘ಹೊಸತನ’ಕ್ಕೆ ಮಿಡಿದಂತಿದೆ. ಮೂಲವೊಂದರ ಪ್ರಕಾರ, ‘ಈ ಹಿಂದೆ ಪ್ರಶಸ್ತಿ ಪಡೆದ ಹಿರಿಯರಿಗೆ ಮತ್ತೆ ಪ್ರಶಸ್ತಿ ಕೊಡುವುದು ಬೇಡ’ ಎನ್ನುವ ಅಲಿಖಿತ ನಿಯಮ ಪ್ರಶಸ್ತಿ ಆಯ್ಕೆ ಪ್ರಕ್ರಿಯೆಯಲ್ಲಿ ಕೆಲಸ ಮಾಡಿದೆ. ಅದರ ಪರಿಣಾಮವಾಗಿಯೇ, ಸ್ಪರ್ಧಾ ಕಣದಲ್ಲಿದ್ದ ಜಾನ್ ಬರುವಾ, ಶಾಜಿ ಎನ್. ಕರಣ್ ಹಾಗೂ